

ಯಾವ ಯಾವ ಬಗೆಯ ಪಾತ್ರಗಳಲ್ಲಿ ಕಾಣಿಸಿಕೊಳ್ಳಲಿದ್ದೀರಿ?

ಇದುವರೆಗೆ ನಾನು ಮಾಡುತ್ತ ಬಂದಿರುವ ಸಿನಿಮಾಗಳು ಒಂದು ರೀತಿಯಾದರೆ, ಈಗ ಒಪ್ಪಿಕೊಂಡಿರುವ ಸಿನಿಮಾಗಳು ಮತ್ತೊಂದೇ ಬಗೆಯವು. ಖಂಡಿತವಾಗಿಯೂ ನಾನು ಒಂದು ಸಿನಿಮಾದಿಂದ ಇನ್ನೊಂದು ಸಿನಿಮಾಗೆ ತುಂಬ ಬೇರೆ ರೀತಿಯ ಪಾತ್ರ ಇರುವ ಹಾಗೆ ನೋಡಿಕೊಳ್ಳುತ್ತಲೇ ಬಂದಿದ್ದೇನೆ. ಆದರೆ ಮೊದಲು ಮಾಡಿರುವುದಕ್ಕೂ ಈಗ ಮಾಡುತ್ತಿರುವ ಸಿನಿಮಾಗಳಿಗೂ ವ್ಯತ್ಯಾಸವಿದೆ. ನನ್ನ ನಟನೆಯಲ್ಲಿಯೂ ಸುಧಾರಣೆಯಾಗಿದೆ. ಪಾತ್ರಗಳ ಆಯ್ಕೆ ಹೆಚ್ಚು ಪ್ರಬುದ್ಧವಾಗಿದೆ. ಹಾಗಾಗಿ ಒಳ್ಳೆಯ ಪಾತ್ರಗಳನ್ನೇ ನನ್ನಿಂದ ನಿರೀಕ್ಷಿಸಬಹುದು.

◆ ನೀವು ಒಂದು ಪಾತ್ರವನ್ನು ಒಪ್ಪಿಕೊಂಡ ಮೇಲೆ ಅದಕ್ಕೆ ಹೇಗೆ ಸಿದ್ಧರಾಗುತ್ತೀರಿ?

ನಾವು ನಟಿಸಬೇಕಾದ ದೃಶ್ಯದ ಸಂಭಾಷಣೆಯನ್ನು ನಾನು ಒಂದು ದಿನ ಮೊದಲೇ ಓದಿಕೊಂಡಿರುತ್ತೇನೆ. ಆದರೆ ಇದೇ ರೀತಿ ಮಾಡಬೇಕು ಎಂದು ನಿರ್ಧರಿಸುವುದಿಲ್ಲ. ಪಾತ್ರದ ಮಾತುಗಳನ್ನು ಮನಸ್ಸಿಗೆ ಇಳಿಸಿಕೊಂಡಿರುತ್ತೇನೆ. ಮರುದಿನ ಸೆಟ್‌ಗೆ ಹೋದಾಗ, ನಿರ್ದೇಶಕರು ಯಾವ ರೀತಿ ನಟನೆ, ಭಾವಾಭಿವ್ಯಕ್ತಿಯನ್ನು ಬಯಸುತ್ತಿದ್ದಾರೆ ಎಂಬುದನ್ನು ತಿಳಿದುಕೊಂಡು, ಅದರ ಪ್ರಕಾರ ನಟಿಸುತ್ತೇನೆ. ಒಂದು ಪಾತ್ರಕ್ಕೆ ನನ್ನನ್ನು ನಾನು ಸಿದ್ಧಮಾಡಿಕೊಳ್ಳುತ್ತಲೇ, ಸೆಟ್‌ನಲ್ಲಿ ಮಾಡಿಕೊಳ್ಳಬಹುದಾದ ಬದಲಾವಣೆಗೂ ಮುಕ್ತಳಾಗಿರುತ್ತೇನೆ. ಯಾಕೆಂದರೆ ನಮ್ಮ ನಟನೆಯಲ್ಲಿ, ಆ ಸೆಟ್, ಎದುರಿನ ಸಹನಟರು, ಅವರ ರಿಯಾಕ್ಷನ್‌ಗಳು, ಮೂಡ್ ಎಲ್ಲವುಗಳ ಪಾಲೂ ಇರುತ್ತದೆ. ಕೆಲವು ನಿರ್ದೇಶಕರು ನಮಗೇ ಸ್ವಾತಂತ್ರ್ಯ ಕೊಡುತ್ತಾರೆ. ಆಗ ನಾವು ಸಹಜವಾಗಿ ನಟಿಸಲು ಸಾಧ್ಯ. ನನಗೆ ಆ ರೀತಿ ನಟಿಸುವುದೇ ಇಷ್ಟ.

◆ ಈಗ ಸಾಮಾನ್ಯವಾಗಿ ಸ್ಟಾರ್‌ಗಳ ಜೊತೆಗೆ ಸಿನಿಮಾ ಮಾಡಬೇಕು ಎಂಬ ಆಸೆ ಇರುತ್ತದೆ. ನೀವು ಶ್ರೀಮುರಳಿ ಜೊತೆ ಬಿಟ್ಟರೆ ದೊಡ್ಡ ಸ್ಟಾರ್‌ಗಳ ಜೊತೆಗೆ ನಾಯಕಿಯಾಗಿ ನಟಿಸಿಲ್ಲ. ಇದರ ಬಗ್ಗೆ ನಿರೀಕ್ಷೆಗಳೇನು?

ಇಲ್ಲಿ ಸ್ಟಾರ್ ನಟರ ಜೊತೆಗೆ ತೆರೆಯನ್ನು ಹಂಚಿಕೊಂಡಷ್ಟೂ ನಾವು ಹೆಚ್ಚು ಜನರಿಗೆ ತಲುಪುತ್ತೇವೆ. ಹಾಗಾಗಿ, ಸ್ಟಾರ್ ನಟರ ಜೊತೆಗೆ ನಟಿಸಬೇಕು ಎಂಬುದು ವೈಯಕ್ತಿಯ ಆಸೆ ಅಷ್ಟೇ ಅಲ್ಲ, ಅದು ವೃತ್ತಿಯ ಅನಿವಾರ್ಯವೂ ಜನರಿಗೆ ತಲುಪುವ ದಾರಿಯೂ ಆಗಿರುತ್ತದೆ. ನಮ್ಮ ಪ್ರತಿಭೆ ದೊಡ್ಡ ಸಿನಿಮಾದಲ್ಲಿ, ದೊಡ್ಡ ನಟರ ಜೊತೆಗೆ ದೊಡ್ಡ ಮಟ್ಟದಲ್ಲಿ ಜನರಿಗೆ ರೀಚ್ ಆಗಬೇಕು ಎಂಬ ಆಸೆ ಇದ್ದೇ ಇರುತ್ತದಲ್ಲವೇ? ನಾನು ಇದುವರೆಗೆ ಮಾಡುತ್ತ ಬಂದಿರುವ ಸಿನಿಮಾಗಳಲ್ಲಿ ನನ್ನ ನಟನೆ ಚೆನ್ನಾಗಿಯೇ ಇದ್ದರೂ, ಜನರಿಗೆ ರೀಚ್ ಆಗುವ ದೃಷ್ಟಿಯಿಂದ ಅವು ಸ್ವಲ್ಪ ಸಮಯ ತೆಗೆದುಕೊಂಡಿತು. ಯಾಕೆಂದರೆ ನಾನು ಹೊಸ ಹೀರೊ ಜೊತೆಗೇ ಪದಾರ್ಪಣೆ ಮಾಡಿದ್ದರಿಂದ. ಹಾಗಂತ ಅದರ ಬಗ್ಗೆ ನನಗೆ ಬೇಸರವೇನೂ ಇಲ್ಲ. ಒಂದೊಂದೇ ಮೆಟ್ಟಿಲು ಹತ್ತುತ್ತ ಯಶಸ್ಸಿನ ಕಡೆಗೆ ನಡೆಯುವ ಪ್ರಕ್ರಿಯೆಯಲ್ಲಿಯೇ ನನಗೆ ನಂಬಿಕೆ ಇದೆ. ಒಂದೇ ರಾತ್ರಿ ಜನಪ್ರಿಯಗೊಳ್ಳುವುದಕ್ಕಿಂತ, ಹೊಸ ಹೀರೊ ಜೊತೆಗೆ ನಟಿಸಿ ನಮ್ಮನ್ನು ನಾವು ಗುರ್ತಿಸಿಕೊಳ್ಳುವುದೇ ನನಗೆ ಹೆಚ್ಚು ಖುಷಿ ಕೊಡುತ್ತದೆ. ಆದರೆ ಜನಪ್ರಿಯತೆಯ ದೃಷ್ಟಿಯಿಂದ ನನಗೆ ಸ್ಟಾರ್ ಸಿನಿಮಾಗಳೂ ಬೇಕು. ಹಾಗಾಗಿ ಈ ಎರಡೂ ದಾರಿಯಲ್ಲಿ ನಡೆಯಲು ನನಗೆ ಇಷ್ಟ. ■

# ಬನಾರಸ್ ಮೊದಲ ನೋಟ

ಜಯತೀರ್ಥ ನಿರ್ದೇಶನದ, ಜೈದ್ ಖಾನ್ ಮತ್ತು ಸೋನಲ್ ಮೊಂತೆರೊ ಅಭಿನಯದ 'ಬನಾರಸ್' ಸಿನಿಮಾ ಪೂರ್ತಿ ಸಿದ್ಧಗೊಂಡು ವರ್ಷಗಳೇ ಕಳೆದಿವೆ. ಕೊರೊನಾ ಕಾರಣಕ್ಕೆ ಬಿಡುಗಡೆಯಾಗದೆ ಉಳಿದಿದ್ದ ಈ ಸಿನಿಮಾ, ಈ ವರ್ಷಾಂತ್ಯದ ಹೊತ್ತಿಗೆ ಪುನೀತ್ ಅವರಿಂದ ಫಸ್ಟ್ ಲುಕ್ ಬಿಡುಗಡೆ ಮಾಡಿಸಿಕೊಂಡು ಪ್ರಚಾರಕಾರ್ಯಕ್ಕೆ ಚಾಲನೆ ಪಡೆದುಕೊಳ್ಳುವ ಸನ್ನಾಹದಲ್ಲಿತ್ತು. ಆದರೆ ಪುನೀತ್ ಅನಿರೀಕ್ಷಿತ ಸಾವು ಚಿತ್ರತಂಡದ ಆಸೆಗೆ ತಣ್ಣೀರೆರಚಿದೆ. ಈಗ ಪುನೀತ್ ಸಮಾಧಿಯ ಬಳಿಯೇ ಚಿತ್ರದ ಫಸ್ಟ್ ಲುಕ್ ಬಿಡುಗಡೆ ಮಾಡುವುದರ ಮೂಲಕ, ಅಪ್ಪು ಆಶೀರ್ವಾದದ ಜೊತೆಯಲ್ಲಿಯೇ ಪ್ರಚಾರ ಕಾರ್ಯಕ್ಕೆ ಹೆಜ್ಜೆ ಮುಂದಿಟ್ಟಿದೆ.

ನವಿರಾದ ಪ್ರೇಮಕಥೆಯುಳ್ಳ ‘ಬನಾರಸ್’ನ ನಾಯಕ ಜೈದ್ ಖಾನ್ ಅವರಿಗಿದು ಮೊದಲ ಸಿನಿಮಾ. ಕನ್ನಡ ಭಾಷೆಯಲ್ಲಿಯೇ ಚಿತ್ರ ನಿರ್ಮಾಣಗೊಂಡಿದ್ದರೂ, ಈಗ ಪ್ಯಾನ್ ಇಂಡಿಯಾ ಸಿನಿಮಾವಾಗಿ ಬಿಡುಗಡೆ ಮಾಡುವ ಸಿದ್ಧತೆಯನ್ನು ಚಿತ್ರತಂಡ ಮಾಡಿಕೊಂಡಿದೆ.

‘ಬನಾರಸ್’ನ ನದೀತಟದಿಂದ ಮುಗಿಲೆತ್ತರಕ್ಕೆ ಏರಿಕೊಂಡಿರುವ ನಾಯಕ ನಾಯಕಿಯ ಚಿತ್ರ, ಸಿನಿಮಾದ ಕುರಿತು ಕುತೂಹಲ ಹುಟ್ಟಿಸುವಂತಿದೆ.

ನ್ಯಾಷನಲ್ ಖಾನ್ಸ್ ಪ್ರೊಡಕ್ಷನ್ಸ್ ಸಂಸ್ಥೆಯಡಿಯಲ್ಲಿ ನಿರ್ಮಾಣಗೊಂಡಿರುವ ಈ ಚಿತ್ರದ 90ರಷ್ಟು ಭಾಗವನ್ನು ಬನಾರಸ್ ಸುತ್ತಮುತ್ತಲೇ ಚಿತ್ರೀಕರಿಸಲಾಗಿದೆ. ಅಲ್ಲಿನ 84 ಘಾಟ್‌ಗಳಲ್ಲಿ ಚಿತ್ರೀಕರಣ ನಡೆಸಿರುವುದು ವಿಶೇಷ. ■

